**ಅಸಲು ದಾವಾ ನಂಃ173/2018**
**ಪಿ.ಡಬ್ಲ್ಯೂಃ 01**

**ದಿನಾಂಕಃ03-03-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು: ಶ್ರೀ ಆರ್ ಎಸ್ ಎಂ., ಪ್ರತಿವಾದಿ ಪರ ವಕೀಲರಿಂದ**

ನಾನು ಒಂದನೆಯ ತರಗತಿಯವರೆಗೆ ವ್ಯಾಸಂಗ ಮಾಡಿರುತ್ತೇನೆ. ದಿಬ್ಬದುರು ಗ್ರಾಮದಲ್ಲಿ ಸುಮಾರು 20 ವರ್ಷಗಳಿಂದ ಇದ್ದು, ಕೂಲಿ ಕೆಲಸ ಮಾಡುತ್ತೇನೆ. ನನ್ನ ತಾತನ ಹೆಸರು ವೆಂಕಟಪ್ಪ. ನನ್ನ ತಾತನಿಗೆ 4 ಜನ ಗಂಡು ಮಕ್ಕಳು ಹಾಗೂ 5 ಜನ ಹೆಣ್ಣು ಮಕ್ಕಳು ಅವರುಗಳೆಂದರೆ ರಾಮಣ್ಣ, ತಿಪ್ಪೇಸ್ವಾಮಿ, ವೆಂಕಟೇಶ ಮತ್ತು ಶಿವಣ್ಣ, ಅಂಜಿನಮ್ಮ, ಜಯಮ್ಮ, ತಿಪ್ಪಕ್ಕ, ಲಕ್ಷ್ಮಿದೇವಿ, ವೆಂಕಟಲಕ್ಷ್ಮೀ.

ರಾಮಣ್ಣ ಮೃತರಾಗಿ 20 ವರ್ಷಗಳಾಗಿರುತ್ತದೆ. ನನ್ನ ತಾಯಿಯ ಹೆಸರು ಸುಶೀಲಮ್ಮ. ನನ್ನ ತಂದೆಗೆ ನಾವು 4 ಜನ ಮಕ್ಕಳು, ಅವರುಗಳೆಂದರೆ ಕಮಲಮ್ಮ, ಪರಮೇಶ, ಕುಮಾರ, ಅನಿತಮ್ಮ. ಕಮಲಮ್ಮ ಹಾಗೂ ಅನಿತಮ್ಮರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಸೇರಿಸಿಲ್ಲ. ನನ್ನ ತಾತ ಮೃತರಾದಾಗ ನನಗೆ ವಿವಾಹವಾಗಿತ್ತು. ದಿಃ25-08-2002 ರಂದು ನನ್ನ ತಂದೆ ಮೃತರಾಗಿರುತ್ತಾರೆ. ದಿಃ30-05-2003 ರಂದು ನನ್ನ ತಾತ, 1 ನೇ ವಾದಿ ಮತ್ತು 1 ರಿಂದ 3 ನೇ ಪ್ರತಿವಾದಿಗಳು ಪಾಲುವಿಭಾಗ ಮಾಡಿಕೊಂಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಪಾಲುವಿಭಾಗವನ್ನು ಚಳ್ಳಕೆರೆ ನೋಂದಣಿ ಕಚೇರಿಯಲ್ಲಿ ನೋಂದಣಿ ಮಾಡಿಸಲಾಗಿತ್ತು ಎಂದರೆ ಸರಿ. ಸದರಿ ಪಾಲುವಿಭಾಗದಲ್ಲಿ ನನ್ನ ತಾಯಿ 2 ನೇ ಭಾಗಸ್ಥಳಾಗಿರುತ್ತಾಳೆ ಎಂದರೆ ನನಗೆ ಗೊತ್ತಿಲ್ಲ.

ಈ ದಾವೆಯನ್ನು ಸಲ್ಲಿಸಲು ಮಾಹಿತಿಯನ್ನು ನಾನು ಮತ್ತು ನನ್ನ ತಮ್ಮ ನೀಡಿರುತ್ತೇವೆ. ನಿಪಿಃ5 ರ ದಾಖಲೆಯು ನನ್ನ ತಾತ, 1 ನೇ ವಾದಿ ಮತ್ತು 1 ರಿಂದ 3 ನೇ ಪ್ರತಿವಾದಿಗಳು ಮಾಡಿಕೊಂಡ ಪಾಲುವಿಭಾಗ ಪತ್ರವಾಗಿರುತ್ತದೆ. ಸದರಿ ಪಾಲುವಿಭಾಗದಲ್ಲಿ ನನ್ನ ತಾಯಿಗೆ ತಿಮ್ಮಪ್ಪಯ್ಯಹಳ್ಳಿ ಗ್ರಾಮದ ಸರ್ವೇ ನಂ.169 ರಲ್ಲಿ 25 ಗುಂಟೆ ಜಮೀನು ಬಂದಿರುತ್ತದೆ ಎಂದರೆ ಸರಿ. ಸದರಿ ಪಾಲುವಿಭಾಗದಲ್ಲಿ ನನ್ನ ತಾಯಿಗೆ ಕೆರೆಯಾಗಹಳ್ಳಿ ಗ್ರಾಮದ ಸರ್ವೇ ನಂ.70 ರಲ್ಲಿ 1 ಎಕರೆ 5 ಗುಂಟೆ ಜಮೀನು ಬಂದಿರುತ್ತದೆ ಎಂದರೆ ಸರಿ. ಸದರಿ ಪಾಲುವಿಭಾಗದಲ್ಲಿ ನನ್ನ ತಾಯಿಗೆ ತಿಮ್ಮಪ್ಪಯ್ಯಹಳ್ಳಿ ಗ್ರಾಮದಲ್ಲಿ 42 X 60 ಅಡಿ ವಿಸ್ತೀರ್ಣದ ಮನೆ ಮತ್ತು ಖಾಲಿ ಜಾಗ ಬಂದಿರುತ್ತದೆ ಎಂದರೆ ಸರಿ. ಪಾಲುವಿಭಾಗದ ಪ್ರಕಾರ ಬಂದಂತಹ ಸ್ವತ್ತುಗಳನ್ನು ನನ್ನ ತಾಯಿ ಅನುಭವಿಸಿಕೊಂಡು ಬರುತ್ತಿದ್ದಾರೆ ಎಂದರೆ ಸರಿ.

ಸದರಿ ಪಾಲುವಿಭಾಗದಲ್ಲಿ ನನ್ನ ತಾತನಾದ ವೆಂಕಟಪ್ಪನಿಗೆ ಕೆರೆಯಾಗಹಳ್ಳಿ ಗ್ರಾಮದ ಸರ್ವೇ ನಂ.70 ರಲ್ಲಿ 3 ಎಕರೆ ಜಮೀನು ಅಂದರೆ ದಾವಾ ಸ್ವತ್ತು ಬಂದಿರುತ್ತದೆ ಎಂದರೆ ಸರಿ. ಸದರಿ ಸ್ವತ್ತನ್ನು ನನ್ನ ತಾತ ಅನುಭವಿಸಿಕೊಂಡು ಬರುತ್ತಿದ್ದರು ಎಂದರೆ ಸರಿ.

2 ನೇ ಪ್ರತಿವಾದಿಗೆ ನಿಪಿಃ5 ರ ಪಾಲುವಿಭಾಗದ ಪ್ರಕಾರ ತಿಮ್ಮಪ್ಪಯ್ಯಹಳ್ಳಿ ಗ್ರಾಮದ ಸರ್ವೇ ನಂ.169 ರಲ್ಲಿ 25 ಗುಂಟೆ ಜಮೀನು, ಕೆರೆಯಾಗಹಳ್ಳಿ ಗ್ರಾಮದ ಸರ್ವೇ ನಂ.70 ರಲ್ಲಿ 1 ಎಕರೆ 5 ಗುಂಟೆ ಜಮೀನು, ತಿಮ್ಮಪ್ಪಯ್ಯಹಳ್ಳಿ ಗ್ರಾಮದಲ್ಲಿ 19 X 60, 29 X 60 ಅಡಿ ವಿಸ್ತೀರ್ಣದ ಮನೆ ಮತ್ತು ಖಾಲಿ ಜಾಗ ಬಂದಿರುತ್ತದೆ ಎಂದರೆ ಸರಿ. ಸದರಿ ಸ್ವತ್ತುಗಳನ್ನು 2 ನೇ ಪ್ರತಿವಾದಿ ಖಾತೆ ಮಾಡಿಸಿಕೊಂಡು ಅನಭುವಿಸಿಕೊಂಡು ಬರುತ್ತಿದ್ದಾರೆ ಎಂದರೆ ಸರಿ.

1 ನೇ ಪ್ರತಿವಾದಿಗೆ ನಿಪಿಃ5 ರ ಪಾಲುವಿಭಾಗದ ಪ್ರಕಾರ ತಿಮ್ಮಪ್ಪಯ್ಯಹಳ್ಳಿ ಗ್ರಾಮದ ಸರ್ವೇ ನಂ.169 ರಲ್ಲಿ 25 ಗುಂಟೆ ಜಮೀನು, ಕೆರೆಯಾಗಹಳ್ಳಿ ಗ್ರಾಮದ ಸರ್ವೇ ನಂ.70 ರಲ್ಲಿ 1 ಎಕರೆ 5 ಗುಂಟೆ ಜಮೀನು, ತಿಮ್ಮಪ್ಪಯ್ಯಹಳ್ಳಿ ಗ್ರಾಮದಲ್ಲಿ 9 X 60, 10 X 60 ಅಡಿ ವಿಸ್ತೀರ್ಣದ ಮನೆ ಮತ್ತು ಖಾಲಿ ಜಾಗ ಬಂದಿರುತ್ತದೆ ಎಂದರೆ ಸರಿ. ಸದರಿ ಸ್ವತ್ತುಗಳನ್ನು 1 ನೇ ಪ್ರತಿವಾದಿ ಖಾತೆ ಮಾಡಿಸಿಕೊಂಡು ಅನಭುವಿಸಿಕೊಂಡು ಬರುತ್ತಿದ್ದಾರೆ ಎಂದರೆ ಸರಿ.

3 ನೇ ಪ್ರತಿವಾದಿಗೆ ನಿಪಿಃ5 ರ ಪಾಲುವಿಭಾಗದ ಪ್ರಕಾರ ತಿಮ್ಮಪ್ಪಯ್ಯಹಳ್ಳಿ ಗ್ರಾಮದ ಸರ್ವೇ ನಂ.169 ರಲ್ಲಿ 26 ಗುಂಟೆ ಜಮೀನು, ಕೆರೆಯಾಗಹಳ್ಳಿ ಗ್ರಾಮದ ಸರ್ವೇ ನಂ.70 ರಲ್ಲಿ 1 ಎಕರೆ 11 ಗುಂಟೆ ಜಮೀನು, ತಿಮ್ಮಪ್ಪಯ್ಯಹಳ್ಳಿ ಗ್ರಾಮದಲ್ಲಿ 20 X 60 ಅಡಿ ವಿಸ್ತೀರ್ಣದ ಖಾಲಿ ಜಾಗ ಬಂದಿರುತ್ತದೆ ಎಂದರೆ ಸರಿ. ಸದರಿ ಸ್ವತ್ತುಗಳನ್ನು 3 ನೇ ಪ್ರತಿವಾದಿ ಖಾತೆ ಮಾಡಿಸಿಕೊಂಡು ಅನಭುವಿಸಿಕೊಂಡು ಬರುತ್ತಿದ್ದಾರೆ ಎಂದರೆ ಸರಿ.

ನಿಪಿಃ5 ರ ಪ್ರಕಾರ ಅವರ ಭಾಗಕ್ಕೆ ಬಂದಂತಹ ಸ್ವತ್ತುಗಳನ್ನು ಪ್ರತ್ಯೇಕವಾಗಿ ಸ್ವಾಧೀನಾನುಭವ ಹೊಂದಿರುತ್ತಾರೆ ಎಂದರೆ ಸರಿ. ಭಾಗಕ್ಕೆ ಬಂದ ಆಸ್ತಿಗಳಲ್ಲಿ ಭಾಗಾಂಶ ಪಡೆದವರನ್ನು ಹೊರತುಪಡಿಸಿ ಬೇರೆಯವರಿಗೆ ಹಕ್ಕು ಅಧಿಕಾರ ಇಲ್ಲ ಎಂದರೆ ಸರಿ. 2003 ನೇ ಇಸವಿಯಿಂದ ನಿಪಿಃ5 ರ ಪಾಲುವಿಭಾಗದ ಪ್ರಕಾರ ಆಸ್ತಿಯನ್ನು ಅನುಭವಿಸಿಕೊಂಡು ಬರಲಾಗುತ್ತಿದೆ ಎಂದರೆ ಸರಿ.

ನನ್ನ ತಾತನಿಗೆ ನಿಪಿಃ5 ರಲ್ಲಿ ಭಾಗಾಂಶವನ್ನು ನೀಡಲಾಗಿದೆಯೇ ಹೊರತು ಜೀವನಾಂಶಕ್ಕಾಗಿ ಜಮೀನನ್ನು ನೀಡಿಲ್ಲ ಎಂದರೆ ಸರಿ. ನನ್ನ ತಾತನ ಮರಣಾನಂತರ ಅವರ ಆಸ್ತಿ 4 ಜನ ಮಕ್ಕಳಿಗೆ ಸೇರತಕ್ಕದ್ದು ಎಂದು ಚನ್ನಪ್ಪ, ಬೋಸಯ್ಯ, ವಿಜಿಯವರ ಸಮಕ್ಷಮ ಮಾತುಕತೆ

ಆಗಿರುತ್ತದೆ. ಸದರಿ ವಿಚಾರವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ವಿಚಾರದ ಬಗ್ಗೆ ಬರವಣಿಗೆ ಆಗಿರುತ್ತದೆ. ಯಾವ ದಿನಾಂಕ, ತಿಂಗಳು ಮತ್ತು ವರ್ಷದಂದು ಬರವಣಿಗೆ ಆಗಿದೆ ಎಂದು ಹೇಳಲು ಆಗುವುದಿಲ್ಲ. ಸದರಿ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಸದರಿ ದಾಖಲೆಯನ್ನು ರೇವಣ್ಣರವರು ಬರೆದಿದ್ದು, ಚನ್ನಪ್ಪ ಮತ್ತು ತಮ್ಮಣ್ಣರವರು ಸಾಕ್ಷಿದಾರರಾಗಿ ಸಹಿ ಮಾಡಿರುತ್ತಾರೆ. ಸದರಿ ದಾಖಲೆಯನ್ನು ಎಲ್ಲಿ ಬರೆದಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನನ್ನ ತಾಯಿಯ ಬಳಿ ನಿಪಿಃ5 ರ ದಾಖಲೆಯನ್ನು ಹೊರತುಪಡಿಸಿ ಬೇರೆ ಯಾವುದೇ ದಾಖಲೆ ಇರುವುದಿಲ್ಲ. ನನ್ನ ತಾಯಿಯ ಬಳಿ ಇದ್ದ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ.

ನಿಪಿಃ5 ರಲ್ಲಿ ಹೆಣ್ಣು ಮಕ್ಕಳಿಗೆ ಆಸ್ತಿಯನ್ನು ನೀಡಿರುವುದಿಲ್ಲ. ಪಾಲುವಿಭಾಗವಾದ ನಂತರ ಎಲ್ಲರು ಪ್ರತ್ಯೇಕವಾಗಿ ವಾಸವಾಗಿರುತ್ತಾರೆ ಎಂದರೆ ಸರಿ. ನನ್ನ ತಾತ ಜೀವಂತವಾಗಿರುವವರೆಗೂ ತಿಮ್ಮಪ್ಪಯ್ಯಹಳ್ಳಿ ವಾಸ ಇದ್ದು, ಅಲ್ಲಿಯೇ ಮಣ್ಣು ಮಾಡಿರುತ್ತದೆ ಎಂದರೆ ಸರಿ. ಪಾಲುವಿಭಾಗ ಆದನಂತರ ನನ್ನ ತಾತನವರ ಯೋಗಕ್ಷೇಮವನ್ನು 5 ಜನ ಹೆಣ್ಣು ಮಕ್ಕಳು ನೋಡಿಕೊಂಡು ಬಂದಿರುತ್ತಾರೆ ಎಂದರೆ ಸರಿಯಲ್ಲ. ನಾವು ಮತ್ತು ಹೆಣ್ಣು ಮಕ್ಕಳು ಇಬ್ಬರು ಯೋಗಕ್ಷೇಮವನ್ನು ನೋಡಿರುತ್ತೇವೆ ಎಂದು ನುಡಿಯುತ್ತಾರೆ.

ಪಾಲುವಿಭಾಗ ಆದನಂತರ ನಾವು ಬೆಂಗಳೂರಿನ ದಿಬ್ಬದುರು ಗ್ರಾಮದಲ್ಲಿ ವಾಸವಾಗಿದ್ದು, ತಿಮ್ಮಪ್ಪಯ್ಯಹಳ್ಳಿ ಗ್ರಾಮಕ್ಕೆ ಬಂದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರಿದು ಬೆಳೆಗಳನ್ನು ತೆಗೆದುಕೊಂಡು ಹೋಗುತ್ತಿದ್ದೇವು ಎಂದು ನುಡಿಯುತ್ತಾರೆ. ನನ್ನ ತಾತ ಸಾಯುವವರೆಗೆ ಆರ್ಯೋಗ್ಯವಾಗಿರುತ್ತಾರೆ. ನನ್ನ ತಾತ ಆರ್ಯೋಗ್ಯವಾಗಿರುವಾಗಲೇ ದಿಃ25-05-2004 ರಂದು 5 ಜನ ಹೆಣ್ಣು ಮಕ್ಕಳ ಹೆಸರಿನಲ್ಲಿ ಮರಣಶಾಸನ ಬರೆಸಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಮರಣಶಾಸನ ಪತ್ರದಲ್ಲಿ ಈಗಾಗಲೇ ಗಂಡು ಮಕ್ಕಳಿಗೆ ಆಸ್ತಿಯಲ್ಲಿ ವಿಭಾಗ ಕೊಟ್ಟಿರುವುದರಿಂದ, ಗಂಡು ಮಕ್ಕಳಿಗೆ ಆಸ್ತಿಯಲ್ಲಿ ಹಕ್ಕು ಇರುವುದಿಲ್ಲ ಎಂದು ಬರೆಸಿರುತ್ತಾರೆ ಎಂದರೆ ಸರಿಯಲ್ಲ.

ದಿಃ28-03-2009 ರಲ್ಲಿ ನಮ್ಮ ತಾತ ಮೃತರಾಗಿರುತ್ತಾರೆ ಎಂದರೆ ಸರಿ. ಸದರಿ ವಿಲ್ ಪತ್ರದ ಆಧಾರದ ಮೇಲೆ 5 ಜನ ಹೆಣ್ಣು ಮಕ್ಕಳಿಗೆ ದಾವಾ ಆಸ್ತಿ ವರ್ಗಾವಣೆ ಆಗಿರುತ್ತದೆ ಎಂದರೆ ಸರಿ. ಆ ಪ್ರಕಾರ 4 ರಿಂದ 8 ನೇ ಪ್ರತಿವಾದಿಯರು ದಾವಾ ಸ್ವತ್ತಿನ ಸ್ವಾಧೀನಾನುಭವ ಇರುತ್ತಾರೆ ಎಂದರೆ ಸಾಕ್ಷಿಯು ನಾನು 30 ಗುಂಟೆ ಜಮೀನಿನಲ್ಲಿ ಬೆಳೆ ಬೆಳೆಯುತ್ತಿದ್ದೇನೆ ಎಂದು ನುಡಿಯುತ್ತಾರೆ. ಸದರಿ 30 ಗುಂಟೆ ಜಮೀನಿಗೆ ಸಂಬಂಧಿಸಿದಂತೆ ನನ್ನ ಹೆಸರಿನಲ್ಲಿ ಖಾತೆ

ಇರುವುದಿಲ್ಲ. ನನ್ನ ತಾತ ಜೀವಂತ ಇರುವಾಗಿನಿಂದಲೂ ಸದರಿ ಜಮೀನನ್ನು ಉಳುಮೆ ಮಾಡುತ್ತಿದ್ದೆ ಎಂದು ನುಡಿಯುತ್ತಾರೆ. ಸದರಿ ವಿಚಾರವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**( ಪ್ರತಿವಾದಿ ಪರ ವಕೀಲರ ಕೋರಿಕೆಯ ಮೇರೆಗೆ ಪಾಟೀ ಸವಾಲನ್ನು ಮುಂದೂಡಲಾಯಿತು)**

(ತೆರೆದ ನ್ಯಾಯಾಲಯದಲ್ಲಿ  ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿಯಿದೆ,

ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.,
ನ್ಯಾಯಾಧೀಶರು, ಚಳ್ಳಕೆರೆ.